## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1861 |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು |
| ಉತ್ತರಿಸುವ ದಿನಾಂಕ | : | 24.03.2020. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಡಿಕೆ ಬೆಳೆಗಾರರ ಸಮಸ್ಯೆ ಪರಿಹರಿಸಲು ಟಾಸ್ಕ್ ಫೋರ್ಸ್ ರಚಿಸಲಾಗಿದೆಯೇ: ರಚಿಸಲಾಗಿದ್ದಲ್ಲಿ, ಯಾವಾಗಿನಿಂದ ಅಸ್ತಿತ್ವಕ್ಕೆ ಬಂದಿದೆ: | ಅಡಿಕೆ ಬೆಳೆಗಾರರ ಸಮಸ್ಯೆ ಪರಿಹರಿಸಲು ಟಾಸ್ಕ್ ಫೋರ್ಸ್ ಸರ್ಕಾರದ ಆದೇಶ ಸಂಖ್ಯೆ: ತೋಇ/131/ತೋಸಪಿ/2019, ಬೆಂಗಳೂರು, ದಿ:29.11.2019 ರನ್ವಯ ರಚಿಸಲಾಗಿದೆ. ದಿನಾಂಕ 29.11.2019 ರಿಂದ ಸದರಿ ಟಾಸ್ಕ್ ಫೋರ್ಸ್ ಅಸ್ತಿತ್ವಕ್ಕೆ ಬಂದಿರುತ್ತದೆ. |
| ಆ) | ಅಡಿಕೆ ಟಾಸ್ಕ್ ಫೋರ್ಸ್ ರಚನೆಯ ಉದ್ದೇಶ ಮತ್ತು ಕಾರ್ಯಸೂಚಿಗಳೇನು: | ಅಡಿಕೆಗೆ ಸಂಬಂಧಿಸಿದ ಬಿಕ್ಕಟ್ಟುಗಳನ್ನು ಮತ್ತು ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಸದರಿ ಅಡಿಕೆ ಕಾರ್ಯಪಡೆಯನ್ನು ರಚಿಸಲಾಗಿದೆ.<br>**ಅಡಿಕೆ ಟಾಸ್ಕ್ ಫೋರ್ಸ್ ನ ಕಾರ್ಯಸೂಚಿಗಳು:**<br>(1) ಅಡಿಕೆಗೆ ಸಂಬಂಧಿಸಿದ ಬಿಕ್ಕಟ್ಟುಗಳನ್ನು ಹಾಗೂ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಸೂಕ್ತ ಕ್ರಮಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.<br>(2) ಸರ್ವೋಚ್ಚ ನ್ಯಾಯಾಲಯದಲ್ಲಿರುವ ಅಡಿಕೆ ಆರೋಗ್ಯಕ್ಕೆ ಹಾನಿಕಾರಕ ಎಂಬ ವಿಷಯದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ಅಡಿಕೆ ಬೆಳೆಗಾರರ ಪರವಾಗಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವುದು.<br>(3) ಅಡಿಕೆಯಲ್ಲಿ ಆರೋಗ್ಯಕ್ಕೆ ಹಾನಿಕಾರಕವಾದ ಅಂಶ ಇರುವುದಿಲ್ಲವೆಂದು ದೃಢೀಕರಿಸುವ ವೈದ್ಯಕೀಯ ವರದಿಗಳನ್ನು ಸಿದ್ಧಪಡಿಸಲು ಕ್ರಮವಹಿಸಿ ಸಲ್ಲಿಸುವುದು.<br>(4) ಸರ್ಕಾರವು ಅಡಿಕೆ ಬೆಳೆಗೆ ಸಂಬಂಧಿಸಿದಂತೆ ಈ ಕಾರ್ಯಪಡೆಗೆ ವಹಿಸುವ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸುವುದು. |

| | | |
|---|---|---|
| ಇ) | ಅಡಿಕೆ ಬೆಳೆಯಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಮೊತ್ತದ ಆದಾಯ ಬರುತ್ತದೆ: ಅಡಿಕೆ ಟಾಸ್ಕ್ ಫೋರ್ಸ್ ಒದಗಿಸಲಾಗಿರುವ ಅನುದಾನ ಎಷ್ಟು: ಈ ಮೊತ್ತವನ್ನು ಯಾವ ಯಾವ ಕಾರ್ಯಗಳಿಗೆ ವೆಚ್ಚ ಮಾಡಲಾಗುತ್ತದೆ? | ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ 2018-19 ನೇ ಸಾಲಿನಲ್ಲಿ ಅಡಿಕೆ ಉತ್ಪನ್ನಕ್ಕೆ ಒಟ್ಟು ರೂ. 122.91ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹವಾಗಿರುತ್ತದೆ.<br>ಅಡಿಕೆ ಟಾಸ್ಕ್ ಫೋರ್ಸ್ ಗೆ ಅನುದಾನ ಒದಗಿಸಲಾಗಿರುವುದಿಲ್ಲ.<br>ಸದರಿ ಟಾಸ್ಕ್ ಫೋರ್ಸ್ ಗೆ ರೂ.10.00 ಕೋಟಿಗಳ ಅನುದಾನವನ್ನು ಅಂದಾಜು ಮಾಡಲಾಗಿದೆ.<br>**ಸದರಿ ಅನುದಾನವನ್ನು ಈ ಕೆಳಕಂಡ ಬಾಬ್ತುಗಳಿಗೆ ವಿನಿಯೋಗಿಸಲು ಉದ್ದೇಶಿಸಲಾಗಿದೆ.**<br>• ಅಡಿಕೆಯು ಆರೋಗ್ಯಕ್ಕೆ ಹಾನಿಕಾರಕವಲ್ಲವೆಂದು ದೃಢೀಕರಿಸುವ ವೈದ್ಯಕೀಯ ವರದಿಗಳನ್ನು ಸಿದ್ಧಪಡಿಸಲು ಹಾಗೂ ಸಂಶೋಧನೆಗೆ ತಗಲುವ ಅಗತ್ಯ ಬಾಬ್ತು.<br>• ಸರ್ವೋಚ್ಚ ನ್ಯಾಯಾಲಯದಲ್ಲಿರುವ ಅಡಿಕೆ ಆರೋಗ್ಯಕ್ಕೆ ಹಾನಿಕಾರಕ ಎಂಬ ವಿಷಯದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಿಂದ ಪ್ರತಿನಿಧಿಸುವ ವಕೀಲರಿಗೆ ಪಾವತಿಸುವ ಬಾಬ್ತು.<br>• ಕಾರ್ಯಪಡೆಯ ವಿವಿಧ ಕಾರ್ಯಗಳನ್ನು ನಿರ್ವಹಿಸಲು ಅವಶ್ಯವಿರುವ ಸಿಬ್ಬಂದಿಗಳ ಖರ್ಚು, ಸಭೆ ಹಾಗೂ ಇತರೆ ವೆಚ್ಚಗಳ ಬಾಬ್ತು. |

**HORTI 183 HGM 2020**

(ನಾರಾಯಣಗೌಡ)

**ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**